**Reshmi Educational and Charitable Trust ®**

# Sri Murugha Rajendra Swamiji B.Ed and M.Ed College

**Saraswatipura, Kusnoor Road, Kalaburagi**

**(Permanently affiliated to Gulbarga University, Kalaburagi and Accredited NAAC 'B' Grade)**

**E-mail: rect_9@yahoo.com website: www.rect.org Phone No.: 08472265502**

---

ರೇಶ್ಮಿ ಎಜುಕೇಶನಲ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್‌ನ ಶ್ರೀಮುರುಘರಾಜೇಂದ್ರ ಸ್ವಾಮೀಜಿ ಬಿಇಡಿ ಕಾಲೇಜಿನ ವಿದ್ಯಾರ್ಥಿಗಳ ಮಾದರಿ ಕಾರ್ಯ

## ವಿದ್ಯಾರ್ಥಿಗಳಿಂದಲೇ ಎರೆಹುಳು ಗೊಬ್ಬರ ತಯಾರಿಕೆ!

■ **ಚಂದ್ರು ಹಿರೇಮಠ**, ಕಲಬುರಗಿ
chandruhiremath06@gmail.com

ಹವ್ಯಾಸ ಎನ್ನುವುದು ಒಬ್ಬೊಬ್ಬರಿಗೆ ಒಂದೊಂದು ಥರ. ಕೆಲವರಿಗೆ ಬರೆಯುವುದು, ಓದುವುದು ಹೀಗೆ ವಿವಿಧ ಹವ್ಯಾಸಗಳನ್ನು ವ್ಯಕ್ತಿಗಳು ರೂಢಿಸಿಕೊಂಡಿರುತ್ತಾರೆ. ಆದರೆ, ಇಲ್ಲೊಂದು ಕಾಲೇಜೊಂದರ ವಿದ್ಯಾರ್ಥಿಗಳು ಸ್ವತಃ ಕಾಲೇಜಿನಲ್ಲಿಯೇ ಎರೆಹುಳು ಗೊಬ್ಬರ ತಯಾರಿಸಿ ರೈತರಿಗೆ ಉಚಿತವಾಗಿ ಎರೆಹುಳು ಗೊಬ್ಬರ ನೀಡುವ ಮೂಲಕ ರಾಜ್ಯಕ್ಕೆ ಮಾದರಿಯಾಗಿದ್ದಾರೆ.

ರೇಶ್ಮಿ ಎಜುಕೇಶನಲ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ಅಡಿಯ ಮುರುಘರಾಜೇಂದ್ರ ಸ್ವಾಮೀಜಿ ಬಿ.ಇಡಿ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿನ ಶಿಕ್ಷಕರಿಂದ ಅರಿತುಕೊಂಡು ಎರೆಹುಳು ಗೊಬ್ಬರ ಘಟಕ ನಿರ್ಮಿಸಿ ರೈತರಿಗೆ ಉಚಿತವಾಗಿ ಗೊಬ್ಬರ ನೀಡುತ್ತಿದ್ದಾರೆ.



ವಿಕ ವಿಶೇಷ

**ಹೇಗೆ ನಿರ್ಮಾಣ..?:**

ರೇಶ್ಮಿ ಕಾಲೇಜಿನಲ್ಲಿ ಬಿಇಡಿ ವಿದ್ಯಾರ್ಥಿಗಳು ಸ್ವತಃ ಒಂದು ಗೊಬ್ಬರ ಘಟಕದ ಗುಂಡಿ ನಿರ್ಮಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಅವರವರ ಮನೆಗಳಿಂದ ವೇಸ್ಟ್ ಆದಂತಹ ಹಣ್ಣು, ತರಕಾರಿ ತಂದು ಸಂಗ್ರಹಿಸುತ್ತಾರೆ. ಮಹಾವಿದ್ಯಾಲಯದ ಆವರಣದಲ್ಲಿರುವ ಗಿಡಮರಗಳ ಎಲೆಗಳು ಹಾಗೂ ಮಹಾವಿದ್ಯಾಲಯದಲ್ಲಿಯೇ ನಾಲ್ಕು ಹಸುಗಳಿಂದ ದೊರೆತ ಕಸ ಹಾಗೂ ಸಗಣಿಯನ್ನು ಸಂಗ್ರಹಿಸಿ ಗೊಬ್ಬರ ಘಟಕಕ್ಕೆ ಹಾಕುತ್ತಾರೆ. ಅದರಲ್ಲಿ ಸುಮಾರು 1 ಕೆಜಿ ಯಷ್ಟು ಎರೆಹುಳುಗಳನ್ನು ಬಿಡಲಾಗಿದೆ ಎಂದು ಸ್ವತಃ ವಿದ್ಯಾರ್ಥಿಗಳೇ ಹೇಳುತ್ತಾರೆ.

**ಒಂದೂವರೆ ಕ್ವಿಂಟಾಲ್‌ನಷ್ಟು ಗೊಬ್ಬರ ನಿರ್ಮಾಣ:** 45 ದಿನಗಳ ನಂತರ ಒಂದು ಗೊಬ್ಬರ ಘಟಕದಿಂದ ಸುಮಾರು ಒಂದೂವರೆ ಕ್ವಿಂಟಾಲ್ ಎರೆಹುಳು ಗೊಬ್ಬರವನ್ನು ತಯಾರಿಸಿ ಉಚಿತವಾಗಿ ರೈತರಿಗೆ ನೀಡಲಾಗುತ್ತಿದೆ.

ಸ್ವತಃ ರೇಶ್ಮಿ ಮಹಾವಿದ್ಯಾಲಯದ ಆವರಣದಲ್ಲಿನ ಎಲ್ಲ ಗಿಡಗಳಿಗೆ ಬಿಇಡಿ ವಿದ್ಯಾರ್ಥಿಗಳಿಗೆ ತಯಾರಿಸಿದ ಎರೆಹುಳು ಗೊಬ್ಬರವನ್ನೇ ಬಳಕೆ ಮಾಡಲಾಗುತ್ತಿದೆ. ಇಲ್ಲಿ ರಾಸಾಯನಿಕವನ್ನು ನಿಷೇಧಿಸಲಾಗಿದೆ. ಸಮಾಜದ ಜವಾಬ್ದಾರಿಯುತ ನಾಗರಿಕರನ್ನು ನಿರ್ಮಿಸುವ ಹಣೆಯನ್ನು ಹೊಂದಿರುವ ಶಿಕ್ಷಣ ಮಹಾವಿದ್ಯಾಲಯವು ಶೈಕ್ಷಣಿಕ ಚಟುವಟಿಕೆಗಳಲ್ಲಿಸಾಮಾಜಿಕ ಜವಾಬ್ದಾರಿಗಳನ್ನು ಹೊತ್ತು ನಡೆಯುತ್ತಿದೆ ಎಂದು ರೇಶ್ಮಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಭಾರತಿ ರೇಶ್ಮಿ ಹೇಳುತ್ತಾರೆ.

### ಮುಖ್ಯಾಂಶಗಳು

- ರೇಶ್ಮಿ ಕಾಲೇಜಿನಲ್ಲಿ ಗೊಬ್ಬರ ಘಟಕ ನಿರ್ಮಾಣ
- ವಿದ್ಯಾರ್ಥಿಗಳಿಂದಲೇ ಎರೆಹುಳು ಗೊಬ್ಬರ ತಯಾರಿಕೆ
- ವಿದ್ಯಾರ್ಥಿಗಳಲ್ಲಿ ಸಾವಯವ ಗೊಬ್ಬರದ ಅರಿವು
- ರೈತರಿಗೆ ಉಚಿತವಾಗಿ ಎರೆಹುಳು ಗೊಬ್ಬರ ನೀಡಿ ರಾಜ್ಯಕ್ಕೆ ಮಾದರಿ

### ವಿದ್ಯಾರ್ಥಿಗಳಿಗೆ ಹೆಚ್ಚಿದ ಆಸಕ್ತಿ

ಎರೆಹುಳು ಗೊಬ್ಬರ ಹೇಗೆ ತಯಾರಿಸುತ್ತಾರೆ ಎನ್ನುವುದೇ ನಮಗೆ ಗೊತ್ತಿರಲಿಲ್ಲ. ಸ್ವತಃ ನಾವೇ ಗೊಬ್ಬರವನ್ನು ತಯಾರಿಸಿದ್ದರಿಂದ ಇನ್ನೂ ಹೆಚ್ಚು ಎರೆಹುಳು ಗೊಬ್ಬರ ತಯಾರಿಸಿ ರೈತರಿಗೆ ನೀಡಬೇಕು ಎನ್ನುವ ಆಸಕ್ತಿ ಹೆಚ್ಚಾಗುತ್ತಿದೆ. ಮತ್ತು ನಮಗೆ ಬಿ.ಇಡಿ ಮುಗಿದ ಮೇಲೆ ನಾವೆಲ್ಲ ಟೀಚರ್ ಆಗುವವರು.ಹೀಗಾಗಿ ಮಕ್ಕಳಿಗೆ ಇದರ ಅರಿವು ಮೂಡಿಸಲಾಗುವುದು ಎಂದು ವಿದ್ಯಾರ್ಥಿಗಳು ಹೇಳುತ್ತಾರೆ.



ಜವಾಬ್ದಾರಿಯುತ ಶಿಕ್ಷಕರಾಗುತ್ತಿರುವ ನಮಗೆ ಪರಿಸರ, ಸಾವಯವ ಕೃಷಿ, ಮಣ್ಣಿನ ಕುರಿತು ಅರಿವು ಪಡೆದುಕೊಂಡೆವು. ಕಸದಿಂದ ರಸ ನಿರ್ಮಿಸುವ ಮಾರ್ಗೋಪಾಯಗಳನ್ನು ಎರೆಹುಳು ಗೊಬ್ಬರ ತಯಾರಿಕೆಯಿಂದ ತಿಳಿದುಕೊಂಡೆವು.

**-ಮಲ್ಲಮ್ಮ ತಲ್ವಾರ್**, ಬಿ.ಇಡಿ ವಿದ್ಯಾರ್ಥಿನಿ



ಪ್ರತಿ 45 ದಿನಗಳ ನಂತರ ವಿದ್ಯಾರ್ಥಿಗಳು ತಯಾರಿಸಿದ ಎರೆಹುಳು ಗೊಬ್ಬರವವನ್ನು ರೈತಾಪಿ ವರ್ಗದವರಿಗೆ ನೀಡಲಾಗುತ್ತದೆ. ಮನೆ ಕೈದೋಟದಲ್ಲಿ ಸಹ ಮಹಿಳೆಯರು ಬಳಸಬಹುದು. ವಿದ್ಯಾರ್ಥಿಗಳು ಕಾರ್ಯ ಶ್ಲಾಘನೀಯ.


**-ಭಾರತಿ ಎನ್.ರೇಶ್ಮಿ**, ಅಧ್ಯಕ್ಷೆ, ರೇಶ್ಮಿ ಶಿಕ್ಷಣ ಸಂಸ್ಥೆ



ರೇಶ್ಮಿ ಕಾಲೇಜಿನ ಬಿಇಡಿ ವಿದ್ಯಾರ್ಥಿಗಳು ನಮ್ಮ ಊರಿಗೆ ಬಂದು ತಮ್ಮ ಕಾಲೇಜಿನಲ್ಲಿ ತಯಾರಿಸಿದ ಎರೆಹುಳು ಗೊಬ್ಬರವನ್ನು ಉಚಿತವಾಗಿ ನೀಡಿ ಇದನ್ನು ಯಾವ ರೀತಿ ಉಪಯೋಗಿಸಬೇಕು ಮತ್ತೆ ಇದರಿಂದ ಆಗುವ ಪ್ರಯೋಜನಗಳನ್ನು ತಿಳಿಸಿಕೊಟ್ಟರು. ಈ ಗೊಬ್ಬರವನ್ನು ತರಕಾರಿ ಬೆಳೆಸಲು ಬಳಸಿದ್ದೇನೆ.

**-ನಾಗಪ್ಪ ಪವಾರ**, ರೈತ, ಕೂಸನೂರ ಗ್ರಾಮ





GPS Map Camera
llege
Google
Gulbarga, Karnataka, India
8V6C+64P, Kusnoor, Gulbarga, Karnataka 585106, India
Lat 17.310496°
Long 76.870316°
26/08/22 01:38 PM


GPS Map Camera
llege
Google
Gulbarga, Karnataka, India
8V6C+64P, Kusnoor, Gulbarga, Karnataka 585106, India
Lat 17.310496°
Long 76.870316°
26/08/22 01:38 PM


GPS Map Camera
Gulbarga, Karnataka, India
8V6C+64P, Kusnoor, Gulbarga, Karnataka 585106, India
Lat 17.310496°
Long 76.870316°
26/08/22 01:38 PM
llege
Google


GPS Map Camera
llege
Google
Gulbarga, Karnataka, India
8V6C+64P, Kusnoor, Gulbarga, Karnataka 585106, India
Lat 17.310496°
Long 76.870316°
26/08/22 01:39 PM




Sri Murugha Rajendra Swamiji B.Ed. and M.Ed. College
• KALABURAGI •
KNOWLEDGE IS POWER

PRINCIPAL
Sri Murugha Rajendra Swamiji
B.Ed. and M.Ed. College,
Kusnoor Road, Kalaburagi-585106